ಕರ್ನಾಟಕ ವಿಧಾನ ಸಭೆ

ಗುರುವಾರ 12ನೇ ಮಾರ್ಚ್ 1998ರಂದು ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ರಮೇಶ್‌ಕುಮಾರ್) ಅವರು ಪೀಠವನ್ನು ಅಲಂಕರಿಸಿದರು.

1) ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ನರಸಿಂಹರಾಜ ಕ್ಷೇತ್ರಕ್ಕೆ ಕುಡಿಯುವ ನೀರಿನ ಸರಬರಾಜು.

31 (171)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರಸಿಂಹರಾಜ ಕ್ಷೇತ್ರಕ್ಕೆ ಕುಡಿಯುವ ನೀರನ್ನು ಒದಗಿಸುವ 8 ಎಂ.ಬಿ.ಡಿ.ಯ ಕಾಮಗಾರಿ ಪ್ರಾರಂಭಗೊಂಡು 13 ವರ್ಷ ಕಳೆದಿದ್ದುದು ಜಲಮಂಡಲಿ ಅಧಿಕಾರಿಗಳು ಈ ಕಾಮಗಾರಿಯನ್ನು ಪೂರ್ಣಗೊಳಿಸದಿರಲು ಕಾರಣವೇನು?

ಆ) ಈ ಕಾಮಗಾರಿಯನ್ನು ಎಷ್ಟು ದಿನಗಳಲ್ಲಿ ಪೂರ್ಣಗೊಳಿಸಿ ನರಸಿಂಸರಾಜ ಕ್ಷೇತ್ರಕ್ಕೆ ನೀರು ಸರಬರಾಜು ಮಾಡಲಾಗುವುದು?

ಶ್ರೀ ಬಿ.ಎಸ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಮೈಸೂರು ನಗರ ಸಮಗ್ರ ನೀರು ಸರಬರಾಜು ಅಭಿವೃದ್ಧಿ ಹಾಗೂ ವಿತರಣಾ ವ್ಯವಸ್ಥೆಯ ನವೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಂಡು 7 ವರ್ಷಗಳು ಸಂದಿವೆ. ಅಂದಾಜನ್ನು ಕರ್ನಾಟಕ ಘನ ಸರ್ಕಾರ ದಿನಾಂಕ 30.3.90ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ದಿನಾಂಕ 17.9.91ರಲ್ಲಿ ತಾಂತ್ರಿಕ ಮಂಜೂರಾತಿಯು ದೊರೆತಿರುತ್ತದೆ. ಗುತ್ತಿಗೆದಾರರು ಪೈಸ್ ಎಸ್ಕಲೇಶನ್ ಕೇಳಿ ಕಾಮಗಾರಿಯನ್ನು ಸ್ಥಗಿತಗೊಳಿಸಿದ್ದರು. ಫೆಬ್ರವರಿ 97ರಲ್ಲಿ ಎಕ್ಸಲೇಷನ್ ಮಂಜೂರಾಗಿದ್ದು ಗುತ್ತಿಗೆದಾರರು ಕಾಮಗಾರಿಯನ್ನು ಮುಂದುವರಿಸಿದ್ದು, ಕೆಲಸ ಪ್ರಗತಿಯಲ್ಲಿದೆ.

ಆ) ಈ ಕಾಮಗಾರಿಯನ್ನು 12:97ಕ್ಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿತ್ತು.

ಆದರೆ ಕೆಲವು ರಸ್ತೆ ಮತ್ತು ಮಳೆ ನೀರಿನ ಚರಂಡಿಗಳಲ್ಲಿ ಪಿ.ಎಸ್.ಸಿ. ಕೊಳವೆಗಳ ಬದಲು ಮೆದು ಉಕ್ಕಿನ ಕೊಳವೆಗಳನ್ನು ಅಳವಡಿಸುವ ಕೆಲಸ ಕೈಗೊಳ್ಳಬೇಕಾಗಿದುದ್ದರಿಂದ ಮತ್ತು ಸುಮಾರು 1900 ಮೀಟರ್ ಉದ್ದ ಕೊಳವೆ ಕಾಮಗಾರಿಯನ್ನು ಗಟ್ಟಿಕಲ್ಲಿನಲ್ಲಿ ಟ್ರೆಂಚ್ ತೆಗೆದುಹಾಕಬೇಕಾಗಿದ್ದುದರಿಂದ, ತಡವಾಗಿದೆ. ಈಗ ಯೋಜನೆಯನ್ನು ಮೇ 98ರಲ್ಲಿ ಪೂರ್ಣಗೊಳಿಸಿ ಜೂನ್ 98ರ ಒಳಗೆ ನರಸಿಂಹರಾಜ ಕ್ಷೇತ್ರಕ್ಕೆ ನೀರು ಒದಗಿಸಲಾಗುವುದು.

ಶ್ರೀ ಇ.ಮಾರುತಿರಾವ್ ಪವಾರ್: ಮಾನ್ಯ ಸಚಿವರು ಇವತ್ತು ಏನು ಉತ್ತರ ಕೊಟ್ಟಿದ್ದಾರೆ ಇದೇ ಉತ್ತರವನ್ನು ನಾನು ಕಳೆದ 3 ವರ್ಷಗಳಿಂದಲೂ ಕೇಳುತ್ತಿದ್ದೇನೆ. ಯಾವುದೇ ಸಂದರ್ಭದಲ್ಲಿ ನಾವು ಪ್ರಶ್ನೆಯನ್ನು ಹಾಕಿ ಉತ್ತರವನ್ನು ಕೇಳಿದಾಗ ಈ ಡಿಸೆಂಬರ್‌ಗೆ ಈ ಕಾಮಗಾರಿ ಪೂರ್ತಿಯಾಗುತ್ತದೆ, ಮಾರ್ಚ್‌ಗೆ ಪೂರ್ತಿಯಾಗುತ್ತದೆಂಬ ಉತ್ತರಗಳನ್ನು ಕೊಡುತ್ತಾರೆ. ಆದರೆ ಇಲ್ಲಿಯವರೆಗೆ ಈ ಕಾಮಗಾರಿ ಪೂರ್ತಿಯಾಗಲಿಲ್ಲ. ಇವತ್ತು ಕುಡಿಯುವ ನೀರಿನ ಯೋಜನೆಯ 8 ಎಂಜಿಡಿ. ಕೆಲಸ ಏನಿದೆ ಇದು ಮೈಸೂರು ನಗರಕ್ಕೆ ಬರಲಿಲ್ಲವೆಂದರೆ, ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕಾವೇರಿ ಕುಡಿಯುವ ನೀರು 35 ವರ್ಷಗಳ ಹಿಂದೆ ಏನು ಬರುತ್ತಿತ್ತು ಅದೇ ನೀರು ಇವತ್ತೂ ಬರುತ್ತಿದೆ. 8 ಎಂಜಿಡಿ ಕೆಲಸ ಪೂರ್ತಿ ಆಗಲಿಲ್ಲವೆಂದರೆ ಆ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗುತ್ತದೆ.

ಅಧ್ಯಕ್ಷರು: ತಾವು ಉತ್ತರವನ್ನು ಓದಿ. ಪ್ರೈಸ್ ಎಸ್ಕಲೇಷನ್‌ಗೆ ಡಿಮ್ಯಾಂಡ್ ಮಾಡಿ, ಕಂಟ್ರಾಕ್ಟರ್ ಕೆಲಸ ಸ್ಟಾಪ್ ಮಾಡಿ ಎಂದು ಅರ್ಬಿಟ್ರೇಷನ್ನಿಗೆ ಅಥವಾ ಕೋರ್ಟಿಗೆ ಹೋದರೆ ಏನು ಮಾಡುವುದಕ್ಕಾಗುತ್ತದೆ? ಅದು ಅವನ ಹಕ್ಕು. ಅದು ಸೆಟಲ್ ಆಗುವವರೆಗೆ ಕೆಲಸ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಇ.ಮಾರುತಿರಾವ್ ಪವಾರ್: ನಾನು ಸ್ಥಳಕ್ಕೆ ಹೋಗಿ ನೋಡಿದ್ದೇನೆ. ಇನ್ನೂ ಎರಡೂ ವರ್ಷವಾದರೂ ಆ ಕಾಮಗಾರಿ ಕೆಲಸ ಮುಗಿಯುವುದಿಲ್ಲ ಎಂದು ನನಗೆ ಅನ್ನಿಸುತ್ತದೆ.

ಅಧ್ಯಕ್ಷರು: ಬಚ್ಚೇಗೌಡರೇ ಅವರು ತಮಗೆ ಹೇಳುವುದು ಏನೆಂದರೆ ಫೆಬ್ರವರಿ-97ರಲ್ಲಿ ಕಂಟ್ರಾಕ್ಟರ್ಸ್ ಡಿಮ್ಯಾಂಡ್ ಎಲ್ಲಾ ರಿಸಾಲ್ವ್ ಆಗಿದೆ. ಈಗ ಇನ್ನು ಎಷ್ಟು ದಿವಸದೊಳಗೆ ಮಾಡಿಕೊಡುತ್ತೀರಿ?

ಶ್ರೀ ಬಿ.ಎಸ್.ಬಚ್ಚೇಗೌಡ: ಈಗಾಗಲೇ ಅಲ್ಲಿ ಶೇಕಡ 80 ರಷ್ಟು ಕೆಲಸ ಮುಗಿದಿದೆ. ಮಾನ್ಯ ಸದಸ್ಯರಿಗೂ ಕೂಡ ಈ ವಿಚಾರ ಗೊತ್ತಿದೆ. ಈ ಕೆಲಸ 1991ರಲ್ಲಿ ಪ್ರಾರಂಭವಾಗಿದ್ದು, 8 ಎಂಜಿಡಿ ವಾಟರ್‌ನ್ನು ಕೊಟ್ಟರೆ ಮೈಸೂರಿಗೆ ನೀರು ಒದಗಿಸಬಹುದು. ಅವರು ಹೇಳಿದ ಹಾಗೆ ನರಸಿಂಹರಾಜ ಕ್ಷೇತ್ರ ಬಹಳ ಹಳೆಯದು.

ಅಲ್ಲಿ ಹಿಂದೆ ಕೊಟ್ಟಂತಹ ನೀರು ಮಾತ್ರ ಹೋಗುತ್ತದೆ. ಹೊಸ ಬಡಾವಣೆಗಳಿಗೆ ಬೇರೆ ಬೇರೆ ರೀತಿಯಲ್ಲಿ ನೀರಿನ ವ್ಯವಸ್ಥೆ ಮಾಡುವ ರೀತಿಯಲ್ಲಿ ನಮಗೂ ಮಾಡಿಕೊಡಿ ಎಂದು ಅವರು ಕೇಳಿದ್ದಾರೆ. ಹಾಗೂ ಅಲ್ಲಿರುವ ಸಿಬ್ಬಂದಿವರ್ಗ ನಿಧಾನ ಮಾಡುತ್ತಿದ್ದಾರೆ, ಆದ್ದರಿಂದ ಬೇಗ ಮಾಡಿಕೊಡಿ ಎಂದು ಕೇಳಿದ್ದಾರೆ. ಇಲ್ಲಿ ಏನಾಗಿದೆ ಎಂದರೆ ತಮಗೆ ಗೊತ್ತಿರುವ ಹಾಗೆ ಗುತ್ತಿಗದಾರರು ಎಸ್ಕಲೇಷನ್‌ಗೆ ಹೆಚ್ಚು ಕೇಳುತ್ತಿರುವುದರಿಂದ ಇದು ಸ್ವಲ್ಪ ತಡವಾಯಿತು ಹಾಗೂ ಪೈಪ್‌ಲೈನ್ ತರಬೇಕಾದರೆ ಸುಮಾರು 8 ಕಿ.ಮೀ. ದೂರದಿಂದ ತರಬೇಕಾಗುತ್ತದೆ. ಕೆಲವು ಕಡೆ ಎಂ.ಐ.ಸ್ಟೀಲ್ ಪೈಪ್ ಹಾಕಬೇಕಾಗುತ್ತದೆ. ಹಾಗೂ ಬೇರೆ ಬೇರೆ ಪೈಪ್ ಹಾಕಬೇಕಾಗಿ ಬಂತು. ಹಾಗೂ ಮಧ್ಯದಲ್ಲಿ ಒಂದು ರಿಂಗ್‌ರೋಡ್ ಬರುತ್ತದೆ ಅಲ್ಲಿ ಮೂಡಾ ದಿಂದ 19 ಲಕ್ಷ ರೂ.ಕೊಟ್ಟರು. ಅಲ್ಲಿ ಕೂಡ ಬೇರೆ ಎಂ.ಐ.ಸ್ಟೀಲ್ ಪೈಪ್ ಹಾಕಬೇಕಾಗುತ್ತದೆ. ಬಹುಶಃ ಈ ಎಲ್ಲಾ ವಿಚಾರಗಳು ತಮಗೆ ಗೊತ್ತಿರುವಂಥದ್ದೇ ಆಗಿದೆ. ನಾವು ಏಪ್ರಿಲ್‌ನಲ್ಲಿ ಶುರು ಮಾಡಿ ಮೇ ಹೊತ್ತಿಗೆ ಇಡೀ ಮೈಸೂರಿಗೆ ನೀರನ್ನು ಒದಗಿಸುವಂಥ ವ್ಯವಸ್ಥೆ ಮಾಡಿಸುತ್ತೇವೆ.

ಶ್ರೀ ಇ.ಮಾರುತಿರಾವ್ ಪವಾರ್: ಮಾನ್ಯ ಸಚಿವರು ಹೇಳಿರುವ ಎಲ್ಲಾ ಅಂಶಗಳು ಸತ್ಯದಿಂದ ಕೂಡಿದೆ. ನಾನು ಸ್ಪಾಟ್‌ಗೆ ಹೋಗಿ ನೋಡಿದ್ದೇನೆ. ಅಲ್ಲಿ ಇನ್ನೂ ಮೂರುವರೆ ಕೀ.ಮೀ. ಪೈಪ್ ಹಾಕಿಕೊಂಡು ಬರಬೇಕಾಗಿದೆ. ಅಲ್ಲಿರುವ ಜೂವೆಲ್ ಫಿಲ್ಟರ್‌ನಲ್ಲಿ ಏನೂ ಕೆಲಸವಾಗಿಲ್ಲ. ಅಲ್ಲಿಂದ ನೀರು ಮುಂದೆ ಬರಬೇಕಾದರೆ ತೊಂದರೆಯಾಗುತ್ತದೆ. ಅಲ್ಲಿ ಸುಮಾರು ಎರಡು ವರ್ಷಗಳಾಗುವಷ್ಟು ಕೆಲಸ ಬಾಕಿ ಇದೆ. ಮೊನ್ನೆ ನಾನು ಆ ಸ್ಪಾಟ್‌ಗೆ ಹೋಗಿ ವಿಚಾರಿಸಿದ್ದೇನೆ. ಕೆಲಸ ನಡೆಯುವ ಜಾಗದಲ್ಲಿ, ಬಿಸಿಲಿನಲ್ಲಿ ನಿಂತು ಕಂಟ್ರಾಕ್ಟರ್ ಸರಿಯಾಗಿ ಕೆಲಸ ಮಾಡುತ್ತಾನೆಯೇ ಇಲ್ಲವೇ ಎನ್ನುವುದನ್ನು ವಿಚಾರಿಸದೆ ಕೇವಲ ಆಫೀಸ್‌ನಲ್ಲಿ ನೆರಳಿನಲ್ಲಿ ಕುಳಿತಿರುವ ಅಧಿಕಾರಿಗಳು ಮೈಸೂರಿನಲ್ಲಿ ಇದ್ದಾರೆ. ಕೆಲಸ ಮಾಡುವವರನ್ನು ವಿಚಾರಿಸಬೇಕು ಎನ್ನುವ ಸೌಜನ್ಯ ಅಲ್ಲಿನ ಅಧಿಕಾರಿಗಳಿಗೆ ಇರಬೇಡವೇ? ಇಂತಹ ಅಧಿಕಾರಿಗಳನ್ನು ಬದಲಾವಣೆ ಮಾಡಿ, ಸರಿಯಾದ ಅಧಿಕಾರಿಗಳನ್ನು ಅಲ್ಲಿ ಹಾಕುವುದರಿಂದ ಕೆಲಸ ಬೇಗ ಆಗುತ್ತದೆ. ಅಲ್ಲಿ ಸ್ಪಾಟ್‌ಗೆ ಹೋಗಿ ನೋಡಿದರೆ ತಿಳಿಯುತ್ತದೆ, ಅಲ್ಲಿ ಕೆಲಸ ಮಾಡುವವರನ್ನು ಬಿಟ್ಟರೆ ಅಲ್ಲಿನ ಅಧಿಕಾರಿಗಳು ಸುಮ್ಮನೆ ಆಫೀಸ್‌ನಲ್ಲಿ ಕುಳಿತುಕೊಂಡಿರುತ್ತಾರೆ. ಸುಮಾರು 10 ವರ್ಷಗಳಿಂದಲೂ ಅಲ್ಲಿ ಬಿಡಾರ ಹೂಡಿ ಕೆಲಸ ಮಾಡದ ಇಂಜಿನಿಯರ್ಸ್ ಅಲ್ಲಿ ಇದ್ದಾರೆ, ಇವರಿಂದ ಏನೂ ಉಪಯೋಗವಿಲ್ಲ. ಆದ್ದರಿಂದ ಇವರನ್ನು ಕೂಡಲೇ ಬದಲಾಯಿಸಿ ಎಂದು ಕೇಳುತ್ತೇನೆ. ಇದು ಬಹಳ ಮಹತ್ವದ ಪ್ರಶ್ನೆ. ಏಕೆಂದರೆ ನಾವು ಕ್ಷೇತ್ರಕ್ಕೆ ಹೋದರೆ ಜನ ಅಲ್ಲಿ ನಮ್ಮನ್ನು ಹೂಡೆಯುತ್ತಾರೆ. ಮೂರು ವರ್ಷದಿಂದ ಏನೂ ಕೆಲಸ ಮಾಡಿಲ್ಲವೆಂದು ಜನ ನಮ್ಮನ್ನು ಬಯ್ಯುತ್ತಾರೆ.

ಶ್ರೀ ಬಿ.ಎಸ್.ಬಚ್ಚೇಗೌಡ: ಅಲ್ಲಿ ಸುಮಾರು ವರ್ಷಗಳಿಂದ ಕೆಲಸ ಮಾಡುವ

ಅಧಿಕಾರಿಗಳು ಬಹಳ ಮಂದಗತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿರುವ ಮಾತು ಸತ್ಯ. ನಾನು ಸದನ ಮುಗಿದ ಮೇಲೆ ಸ್ಥಳಕ್ಕೆ ಭೇಟಿ ನೀಡಿ ಅಲ್ಲಿನ ವಾಸ್ತವಾಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ನಾನು ಮತ್ತು ಅವರು ಸೇರಿ ಮುಂದಿನ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಇ.ಮಾರುತಿರಾವ್ ಪವಾರ್: ಸಚಿವರು ಅಲ್ಲಿ ಕೆಲಸ ಮಾಡುವ ಅಧಿಕಾರಿಗಳು ಮಂದಗತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ ಅವರ ಮೇಲೆ ಏನು ಕ್ರಮ ಜರುಗಿಸುತ್ತೀರಿ?

ಶ್ರೀ ಬಿ.ಎನ್.ಬಚ್ಚೇಗೌಡ: ನಾನು ಸ್ಥಳಕ್ಕೆ ಭೇಟಿ ನೀಡಿ ಅಲ್ಲಿ ಮಂದಗತಿಯಲ್ಲಿ ಕೆಲಸ ಮಾಡುವ ಅಧಿಕಾರಿಗಳನ್ನು ವಿಚಾರಿಸುತ್ತೇನೆ. ಪೈಪ್‌ಲೈನ್ ಲೇ ಮಾಡದೇ ಇರುವುದಕ್ಕೆ ಕಾರಣ, ಪಿಹೆಚ್‌ಸಿ ಪೈಪ್ ಲೈನ್‌ಹಾಕಲು ಏನು ಅಡ್ಡ ಬಂದಿದೆ, ಇವುಗಳನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಬಾದಾಮಿ ಪಟ್ಟಣಕ್ಕೆ ಕುಡಿಯುವ ನೀರಿನ ಯೋಜನೆ

33 (164)

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಬಾದಾಮಿ): ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾದಾಮಿ ಪಟ್ಟಣಕ್ಕೆ ತ್ವರಿತ ನೀರು ಸರಬರಾಜು ಯೋಜನೆಯನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಯಾವಾಗ ಕಳಿಸಲಾಗಿದೆ.

ಆ) ಕೇಂದ್ರಕ್ಕೆ ಒತ್ತಡ ತಂದು ಈ ಕಾಮಗಾರಿಯನ್ನು ಜರೂರಾಗಿ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಿ.ಎಸ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):

ಅ) ಕೇಂದ್ರ ಸರ್ಕಾರಕ್ಕೆ ದಿನಾಂಕ 23.5.96ರಲ್ಲಿ ಅನುಮೋದನೆಗಾಗಿ ಕಳುಹಿಸಲಾಗಿದೆ.

ಆ) ಕೈಗೊಳ್ಳಲಾಗುವುದು.

ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಬಾದಾಮಿ ಪಟ್ಟಣಕ್ಕೆ ಶಾಶ್ವತ ಪರಿಹಾರದ ಕುಡಿಯುವ ನೀರಿನ ಯೋಜನೆಗೆ ತಾವು ಕೇಂದ್ರ ಸರ್ಕಾರಕ್ಕೆ 23-5-96ರಂದು ಕಳುಹಿಸಿದ್ದೀರಿ. ಇವತ್ತಿಗೆ ಎರಡು ವರ್ಷವಾಯಿತು, ಏಕೆ ನಿಧಾನವಾಗಿದೆ? ಇದಕ್ಕೆ ಏನು ಕಾರಣ?